ಶ್ರೀ ವಾಟಾಳ್ ನಾಗರಾಜ್: ಸೂಕ್ತ ಕ್ರಮ ಎಂದರೆ ಏನು ಸ್ವಾಮಿ?

(ಗೊಂದಲ)

ಉಪಾಧ್ಯಕ್ಷರು: ಸರ್ಕಾರದೊಳಗೆ ಒಂದು ವ್ಯವಸ್ಥೆ ಇದೆ.

ಶ್ರೀ ವಾಟಾಳ್ ನಾಗರಾಜ್: ನಾವು ನೇರವಾಗಿ ಆಪಾದನೆ ಮಾಡುತ್ತಾ ಇದ್ದೇವೆ.

ಉಪಾಧ್ಯಕ್ಷರು: ತಾವು ದಯಮಾಡಿ ಕೇಳಿ. ನೀವು ದಯಮಾಡಿ ಆ ರೀತಿಯಲ್ಲಿ ಕೇಳಬೇಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸಿವಿಲ್ ಎನಫೋರ್ಸ್‌ಮೆಂಟಿನವರಿಗೆ ಈಗ್ಗೆ ಒಂದು ತಿಂಗಳ ಹಿಂದೆ ನಾನೇ ಲೆಟರ್ ಹೆಡ್‌ನಲ್ಲಿ ಬರೆದು ಕೊಟ್ಟಿದ್ದರೂ ಕೂಡ ಇದುವರೆಗೂ ಏನೂ ಆಗಿಲ್ಲ. ಇನ್ನು ಎಂದು ಇವರು ಕ್ರಮ ತೆಗೆದುಕೊಳ್ಳುವುದು? ನಾನೇ ಸ್ವತಃ ಹೋಗಿ ಸಿವಿಲ್ ಎನ್‌ಫೋರ್ಸ್‌ಮೆಂಟ್‌ನವರಿಗೆ ಪತ್ರ ಕೊಟ್ಟಿದ್ದೇನೆ. ಇದುವರೆಗೆ ಕ್ರಮ ತೆಗೆದುಕೊಂಡಿಲ್ಲ. ಈಗ ಮತ್ತೆ ಇವರು ''ಸೂಕ್ತ ಕ್ರಮ'' ಎಂದು ಹೇಳುತ್ತಿದ್ದಾರೆ.

ಉಪಾಧ್ಯಕ್ಷರು: ಶೂನ್ಯವೇಳೆಯಲ್ಲಿ ಎಷ್ಟು ಹೊತ್ತು ಚರ್ಚೆ ಮಾಡುವುದು? ನೀವೇ ಹೇಳಿದಿರಿ, ಶೂನ್ಯವೇಳೆಯಲ್ಲಿ ಎಷ್ಟು ಟೈಮ್ ಚರ್ಚೆ ಮಾಡುವುದು?

ಶ್ರೀ ವಾಟಾಳ್ ನಾಗರಾಜ್: ಶೂನ್ಯವೇಳೆ ಎಂದರೆ, ಇದೇನು ರಾಹುಕಾಲವೇ ಅಥವಾ ಯಮಗಂಡಕಾಲವೇ?

ಉಪಾಧ್ಯಕ್ಷರು: ಈಗ ಸಭೆಯನ್ನು ಮುಂದೂಡಲಾಗಿದೆ. ಊಟದ ನಂತರ 3 ಗಂಟೆಗೆ ಪುನಃ ಸಭೆ ಸೇರಲಾಗುವುದು.

(ಸದನವು ಮತ್ತೆ ಮಧ್ಯಾಹ್ನ 3.20 ಗಂಟೆಗೆ ಸಮಾವೇಶಗೊಂಡಿತು)

(ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮನಿಯವರು) ಪೀಠವನ್ನಲಂಕರಿಸಿದರು)

ಉಪಾಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆ; ತೆಗೆದುಕೊಳ್ಳೋಣ. ಶೂನ್ಯ ವೇಳೆ ಮುಕ್ತಾಯವಾಯಿತು. ಗಮನ ಸೆಳೆಯುವ ಸೂಚನೆಗಳು ಎರಡಿವೆ.

## ಅಧ್ಯಕ್ಷರ ಅಪ್ಪಣೆ ಮೇಲೆಗೆ ಪ್ರಸ್ತಾಪಿಲ್ಪಟ್ಟ ವಿಷಯ

**(ಋ) ಕಾವೇರಿ ಪ್ರಾಧಿಕಾರ ರಚನೆ ಕುರಿತು.**

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಇದು ಗಮನ ಸೆಳೆಯುವ

ಸೂಚನೆಯಲ್ಲಿ ಬರುವುದಕ್ಕಾಗುವುದಿಲ್ಲ, ಇದು ಶೂನ್ಯ ವೇಳೆಯಲ್ಲಿತ್ತು. ಕಾವೇರಿ ಪ್ರಾಧಿಕಾರ ರಚನೆಯ ಬಗ್ಗೆ ಇವತ್ತು ಆಗಲೇ ಸರ್ವೋಚ್ಚ ನ್ಯಾಯಾಲಯ ಎರಡು ವಾರಗಳ ಕಾಲವಕಾಶ ಕೊಟ್ಟು ಅಷ್ಟರೊಳಗೆ ನೀವು ಏನೇ ಹೇಳಬೇಕಾದರೂ ನ್ಯಾಯಾಲಯಕ್ಕೆ ಹೇಳಬೇಕು ಎಂದು ಇವತ್ತು ಹೇಳಿದ್ದಾರೆ. ನಾವು ಇವತ್ತು ಈ ಕಾವೇರಿ ಕರಡು ನಿರ್ಣಯವನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು ಎಂದು ಹೇಳಿ ಸರ್ವಪಕ್ಷಗಳ ಸಭೆ ಸೇರಿಸಿ ಸರ್ಕಾರದ ತಜ್ಞರ ಒಂದು ನಿಯೋಗ ಕೇಂದ್ರಕ್ಕೆ ಹೋಗಿ ಎಲ್ಲಾ ಮಾತುಕತೆ ನಡೆದಿದೆ. ಇಷ್ಟಾದರೂ ಇವತ್ತಿನ ದಿವಸ ಸರ್ವೋಚ್ಚನ್ಯಾಯಾಲಯ ಎಲ್ಲಾ ನ್ಯಾಯಾಲಯಗಳಿಗೆ ಒಂದು ಆದೇಶವನ್ನು ನೀಡಿದೆ, ತೀರ್ಪನ್ನು ನೀಡಿದೆ. ನೀವು ಎರಡು ವಾರದೊಳಗೆ ನಿಮ್ಮ ತಿದ್ದುಪಡಿಯನ್ನು ಕಳುಹಿಸಬೇಕು ಎಂದು ಹೇಳಿದೆ. ಒಂದು ಕಡೆ ನಮ್ಮ ಸರ್ಕಾರದ ನಿಲುವು ಆ ಕರಡು ನಿರ್ಣಯವನ್ನು ತಿರಸ್ಕಾರ ಮಾಡಬೇಕು ಎಂಬುದು. ಇದು ನಮಗೆ ಮರಣ ಶಾಸನವಾಗಿದೆ, ಕರ್ನಾಟಕಕ್ಕೆ ಅನ್ಯಾಯವಾಗಿದೆ. ಇದು ಬಹಳ ದ್ರೋಹ ಎಂದು ನಾವು ಸಮಗ್ರವಾಗಿ ಒಮ್ಮತದಿಂದ ತೀರ್ಮಾನ ಮಾಡಿದ್ದೇವೆ. ಈಗ ಸರ್ಕಾರದ ನಿರ್ಧಾರ ಏನು? ಕೇಂದ್ರ ಸರ್ಕಾರದ ಜೊತೆಗೆ ಒಂದು ನಿಯೋಗ ಹೋಗಿತ್ತು. ಅದರ ಪರಿಸ್ಥಿತಿ ಏನು ಮತ್ತು ಅದಕ್ಕೆ ಇದುವರೆಗೆ ನಿಮ್ಮ ಸರ್ಕಾರದ ನಿಲುವು ಏನು ಎಂದು ಸ್ಪಷ್ಟೀಕರಣ ನೀಡಬೇಕು.

ಶ್ರೀ ಕೆ.ಎನ್.ನಾಗೇಗೌಡ: (ಭಾರೀ ನೀರಾವರಿ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ಶ್ರೀ ವಾಟಾಳ್ ನಾಗರಾಜ್‌ರವರು ಏನು ಪ್ರಸ್ತಾಪ ಮಾಡಿದ್ದಾರೆ ಅದು ನಿಜ. ಸುಪ್ರೀಂ ಕೋರ್ಟ್‌ನಲ್ಲಿ ಒಂದು ಬೆಂಚ್‌ನಲ್ಲಿ ಟೈಮ್ ಫಿಕ್ಸ್ ಮಾಡಿ ಎರಡು ವಾರದೊಳಗೆ ಕರ್ನಾಟಕ ಮತ್ತು ಕೇರಳ ರಾಜ್ಯಗಳು ನಮ್ಮ ಒಂದು ಡ್ರಾಫ್ಟ್ ಸ್ಕೀಂ ಕ್ಲಾಸ್ ಏನಿದೆ ಅದನ್ನು ಕ್ಲಾಸ್‌ಬೈ ಕ್ಲಾಸ್ ಕಾಮೆಂಟ್ ಮಾಡಬೇಕು ಎಂಬುದನ್ನು ಹೇಳಿದ್ದಾರೆ. ಆ ಬಗ್ಗೆ ಇನ್ನೂ ನಮಗೆ ಆರ್ಡರ್ ಬಂದಿಲ್ಲ. ನಿನ್ನೆ ದಿವಸ ಹೋಗಿದ್ದ ಕಾರ್ಯದರ್ಶಿಗಳು ಇವತ್ತು ಬೆಳಿಗ್ಗೆ ಬಂದಿದ್ದಾರೆ. ಇವತ್ತು ನಮ್ಮ ಲಾಯರ್ ಜೊತೆ ಕುಳಿತು ಅವರು ಚರ್ಚೆ ಮಾಡುವವರಿದ್ದಾರೆ. ಆದ್ದರಿಂದ ಇವತ್ತು ಬೇಡ. ಮುಖ್ಯಮಂತ್ರಿಗಳು ಮತ್ತು ಸಭಾಧ್ಯಕ್ಷರ ಜೊತೆಯಲ್ಲಿ ಸಹ ನಾವು ಮಾತನಾಡಿದ್ದೇವೆ. ನಾಳೆ ಮಧ್ಯಾಹ್ನ 3 ಗಂಟೆಗೆ ನಮ್ಮ ರಾಜಕೀಯ ಪಕ್ಷದ ಮುಖಂಡರುಗಳನ್ನು ಸಭಾಧ್ಯಕ್ಷರವರ ಚೇಂಬರ್‌ಗೆ ಕರೆದು ಈಗಿರತಕ್ಕಂಥ ಹಿನ್ನೆಲೆಯಲ್ಲಿ ಮುಂದೆ ಏನು ಮಾಡಬೇಕು ಎಂಬುದನ್ನು ಆಲೋಚನೆ ಮಾಡಬೇಕು ಎಂದು ನಿರ್ಧರಿಸಿದ್ದೇವೆ. ಇಲ್ಲಿಯವರೆಗೆ, ಈ ಕ್ಷಣದವರೆಗೆ ನಾವು ಕರಡು ನೀತಿಯನ್ನು ತಿರಸ್ಕರಿಸಬೇಕು ಎಂಬುದರಲ್ಲಿ ಯಾವುದೇ ಬದಲಾವಣೆ ಇಲ್ಲ. ಅದಕ್ಕೆ ನಾವು ನಮ್ಮ ಲಾಯರ್‌ಗಳಿಗೆ ಅದೇ ರೀತಿಯಲ್ಲಿ ಹೇಳಿದ್ದೇವೆ. ಅವರು ಅದೇ ವಾದವನ್ನು ಇಟ್ಟಿದ್ದಾರೆ. ನಾವು ಪ್ರಧಾನಮಂತ್ರಿಗಳಿಗೆ, ಮುಖ್ಯಮಂತ್ರಿಗಳವರ ನಾಯಕತ್ವದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರ ಜೊತೆಯಲ್ಲಿ ಹೋಗಿ ಮನವಿ ಕೊಟ್ಟಿದ್ದೇವೆ. ತದನಂತರ ಪಾರ್ಲಿಮೆಂಟ್‌ನಲ್ಲಿ ಸಹ ಜಲಸಂಪನ್ಮೂಲ ಮಂತ್ರಿಗಳೂ

ಸಹ ಡ್ರಾಫ್ಟ್ ಸ್ಕೀಂ ಬಗ್ಗೆ ನಾನು ರಾಜ್ಯಗಳ ಜೊತೆಯಲ್ಲಿ ಮಾತನಾಡುತ್ತೇನೆ. ಅವರ ಜೊತೆಯಲ್ಲಿ ಮಾತುಕತೆ ಮಾಡಿ ನಂತರ ಕ್ಯಾಬಿನೆಟ್‌ನಲ್ಲಿ ನಂತರ ಪಾರ್ಲಿಮೆಂಟ್ ಎನ್ನತಕ್ಕಂಥ ಮಾತನ್ನು ರಿಟನ್ ರಿಪ್ಲೈಗೆ ನಮ್ಮ ರಾಜ್ಯದ ಸಂಸತ್‌ನಲ್ಲಿ ಕೊಟ್ಟಿದ್ದಾರೆ. ಆದ್ದರಿಂದ ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಹೆಚ್ಚು ಚರ್ಚೆ ಮಾಡುವುದಿದೆ. ಶ್ರೀ ವಾಟಾಳ್ ನಾಗರಾಜ್‌ರವರು ಬಹಳ ಅನುಭವವಿರುವ ಶಾಸಕರು. ನಾಳೆ 3 ಗಂಟೆಗೆ ವಿವಿಧ ರಾಜಕೀಯ ಪಕ್ಷದವರನ್ನು ಕರೆದು ಸಭಾಧ್ಯಕ್ಷರ ಚೇಂಬರ್‌ನಲ್ಲಿ ಕುಳಿತು ಮಾತನಾಡಿ ನಂತರ ಕಾರ್ಯಕ್ರಮ ರೂಪಿಸಬೇಕು. ಇದರ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿರುವುದರಿಂದ ಈ ಬಗ್ಗೆ ಚರ್ಚೆ ಬೇಡ ಎಂದು ತಮ್ಮ ಮೂಖಾಂತರ ಮಾನ್ಯ ವಾಟಾಳ್ ನಾಗರಾಜ್‌ರವರ ಹತ್ತಿರ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ನಾನು ಅದರ ವ್ಯಾಪ್ತಿಗೆ ಹೋಗುವುದಿಲ್ಲ. ಈ ವಿಷಯದಲ್ಲಿ ಸರ್ಕಾರಕ್ಕೆ ಒಂದು ಸ್ಪಷ್ಟ ನಿಲುವು ಇರಬೇಕಲ್ಲವೆ.

ಉಪಾಧ್ಯಕ್ಷರು: ಮಂತ್ರಿಗಳು ಸ್ಪಷ್ಟಪಡಿಸಿದ್ದಾರೆ.

ಶ್ರೀ ಕೆ.ಎನ್.ನಾಗೇಗೌಡ: ಇಲ್ಲಿಯವರೆಗೂ ಸಹ ನಾವು ಸ್ಪಷ್ಟವಾಗಿ ಕರಡು ನಿರ್ಣಯವನ್ನು ತಿರಸ್ಕಾರ ಮಾಡಿದ್ದೇವೆ. ಅದನ್ನು ನಾವು ಒಪ್ಪುವುದಿಲ್ಲ. ಇದನ್ನು ನಾವು ಪ್ರಧಾನ ಮಂತ್ರಿಗಳಿಗೂ, ಕೋರ್ಟಿಗೂ ತಿಳಿಸಿದ್ದೇವೆ. ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಜಡ್ಜ್ ನಿನ್ನೆ ಏನು ಹೇಳಿದ್ದಾರೆ ಎಂಬ ಬಗ್ಗೆ ನಮಗೆ ಇನ್ನೂ ಆರ್ಡರ್ ಬಂದಿಲ್ಲ. ಆ ಹಿನ್ನೆಲೆಯಲ್ಲಿ ಸರ್ಕಾರ ಮುಂದೆ ಏನು ಮಾಡಬೇಕು ಎಂಬುದರ ಬಗ್ಗೆ ವಿವಿಧ ರಾಜಕೀಯ ಪಕ್ಷದ ಮುಖಂಡರುಗಳನ್ನು ಕರೆದು ನಾಳೆ ಸ್ಪೀಕರ್‌ರವರ ಕೊಠಡಿಯಲ್ಲಿ ಸೇರಿ ಮಾತನಾಡೋಣ. ಅಲ್ಲಿಯವರೆಗೆ ಶ್ರೀ ವಾಟಾಳ್ ನಾಗರಾಜ್‌ರವರು ದಯಮಾಡಿ ಅವಕಾಶ ಮಾಡಿಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಈ ಸಂದರ್ಭದಲ್ಲಿ ನಿನ್ನೆ ಗೃಹಸಚಿವರು ದಕ್ಷಿಣ ವಲಯ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ತಿರುವನಂತಪುರದಲ್ಲಿ ಕರೆದಿದ್ದರು. ಅಲ್ಲಿ ಈ ವಿಚಾರಗಳೂ ಕೂಡ ಪ್ರಸ್ತಾಪವಾಯಿತು. ತಮಿಳುನಾಡು ಮುಖ್ಯಮಂತ್ರಿ ಶ್ರೀ ಕರುಣಾನಿಧಿಯವರ ಪರವಾಗಿ ಅಲ್ಲಿನ ಕಾನೂನು ಸಚಿವರು ಬಂದಿದ್ದರು. ಅವರು ಈ ವಿಷಯವನ್ನು ಚರ್ಚೆ ಮಾಡಿದಾಗ ನಾವು ಮೇಕೆದಾಟು ಮುಂತಾದ ವಿಷಯಗಳನ್ನು ಪ್ರಸ್ತಾಪ ಮಾಡಿದಾಗ ಇವೆಲ್ಲವೂ ಕೂಡ ನ್ಯಾಯಾಲಯದ ಹೊರಗೆ ಮಾತುಕತೆಯಿಂದ ಬಗೆಹರಿಸಬೇಕು ಎನ್ನುವ ನಮ್ಮ ನಿಲುವನ್ನು ಪುನರ್ ಪ್ರಸ್ತಾಪ ಮಾಡಿದಾಗ ಗೃಹಸಚಿವರೂ ಕೂಡ ಅದಕ್ಕೆ ಸಮ್ಮತಿ ಕೊಟ್ಟರು. ಅವತ್ತಿನ ಸಭೆಯ ಚೇರ್ಮನ್ ಆಗಿದ್ದಂಥ ಗೃಹಸಚಿವರಾದ ಶ್ರೀ. ಇಂದ್ರಜಿತ್‌ಗುಪ್ತ ಅವರೂ ಸಹ ಈ ವಿಷಯದಲ್ಲಿ ಇಂಥ ಸಮಸ್ಯೆಗಳು ಏನಿದ್ದರೂ ಕೂಡ

ರಾಜ್ಯರಾಜ್ಯಗಳ ನಡುವೆ ಪರಸ್ಪರ ಮಾತುಕತೆಯಿಂದ ಬಗೆಹರಿಯಬೇಕೇ ವಿನಃ ಬೇರೆ ದಾರಿ ಇಲ್ಲ. ಆದುದರಿಂದ ಇದನ್ನು ಪರಾಂಭರಿಸಬೇಕು ಎಂಬ ಮಾತನ್ನು ಹೇಳಿದ್ದಾರೆ. ಅದನ್ನು ನಾನು ಈ ಸದನದ ಮೂಲಕ ತಮಗೆ ತಿಳಿಸಬಯಸುತ್ತೇನೆ.

**(ಎ) ಕುಂದಾಪುರ ತಾಲ್ಲೂಕಿನ ಗ್ರಾಮಪಂಚಾಯಿತಿ ನೌಕರರನ್ನು ವಜಾ ಮಾಡಿದ್ದರಿಂದಾಗಿ ಆತ ಆತ್ಮಹತ್ಯೆ ಮಾಡಿಕೊಂಡಿರುವುದು.**

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ): ನಾವು ಮೂರು ಜನ ಕಾಂಗ್ರೆಸ್‌ನವರಿಗೆ ಶೂನ್ಯ ವೇಳೆಯಲ್ಲಿ ಅವಕಾಶ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದಿರಿ. ಇವ್ವೊತ್ತು ನಮ್ಮ ಪಕ್ಷದ ವತಿಯಿಂದ ಒಬ್ಬರೇ ಮಾತನಾಡಿರುವುದು. ನಮಗೆ ಏತಕ್ಕೆ ಅವಕಾಶ ಕೊಡುವುದಿಲ್ಲ? ಏತಕ್ಕೆ ನಾನು ಕಡಿಮೆ ಗಲಾಟೆ ಮಾಡುತ್ತೇವೆ ಎಂದೇ, ತಾವು ಉತ್ತರ ಕೊಡಬೇಕು. ನಾವು ಏನೂ ವ್ಯತಿರಿಕ್ತವಾಗಿ ಹೇಳಿಲ್ಲ. ತಾವು ನಿನ್ನೆ ಏನು ಹೇಳಿದ್ದೀರಿ ಅದಕ್ಕೆ ಮಾತ್ರ ನಾವು ಕೇಳುತ್ತಿದ್ದೇವೆ. ನಿನ್ನೆ ತಾವು ಮೂರು ಜನ ಶಾಸಕರಿಗೆ ಅವಕಾಶ ಕೊಡುತ್ತೇವೆ ಎಂದು ಹೇಳಿದ್ದೀರಿ. ನಾವು ಮೂರು ಜನರೂ ಹೆಸರು ಕೊಟ್ಟಿದ್ದೇವೆ.

ಉಪಾಧ್ಯಕ್ಷರು: ಸಮಯದ ಪ್ರಜ್ಞೆ ಇಟ್ಟುಕೊಂಡು ಮಾತನಾಡಲು ಅವಕಾಶ ಇದೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಆ ಸಮಯದ ಪ್ರಜ್ಞೆ ಇರುವುದರಿಂದಲೇ ನಾವು ಕೇಳುತ್ತಿರುವುದು.

ಉಪಾಧ್ಯಕ್ಷರು: ನೀವು ವಿಷಯ ಪ್ರಸ್ತಾಪ ಮಾಡುವುದಕ್ಕೆ ಅರ್ಧರ್ಧ ಗಂಟೆ ತೆಗೆದುಕೊಂಡರೆ ಏನು ಮಾಡುವುದು?

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ತಾವು ಏನು ಹೇಳಿದ್ದೀರಿ, ಅದಕ್ಕೆ ನಾವು ಬದ್ಧರಾಗಿದ್ದೇವೆ.

ಉಪಾಧ್ಯಕ್ಷರು: ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ನಾಳೆ ನಾವು ಇರುವುದಿಲ್ಲ. ನಾವು ಹೆಚ್ಚಿಗೆ ಏನನ್ನೂ ಕೇಳುತ್ತಿಲ್ಲ. ತಾವೇನು ನಿನ್ನೆ ಆ ಪೀಠದಿಂದ ಮೂರು ಜನ ಕಾಂಗ್ರೆಸ್ ಪಕ್ಷದ ಶಾಸಕರಿಗೆ ಮಾತನಾಡಲು ಅವಕಾಶ ಕೊಡುವುದಾಗಿ ಹೇಳಿದ್ದಿರಿ, ಆ ಹಿನ್ನೆಲೆಯಲ್ಲಿ ನಾವು ಕೇಳುತ್ತಿದ್ದೇವೆ.

ಉಪಾಧ್ಯಕ್ಷರು: ನಾವೇನು ನಿರ್ಣಯ ತೆಗೆದುಕೊಂಡಿರುತ್ತೇವೆ ಅದನ್ನು ತಾವು ಪ್ರಶ್ನೆ ಮಾಡಬಾರದು.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ತಾವೇನು ಹೇಳುತ್ತೀರಿ ಅದಕ್ಕೆ ನಾವು ಬದ್ದರು.